ಈ) 1995-96ನೇ ಸಾಲಿಗೆ ನಿಗದಿಪಡಿಸಿದ ಹಣವನ್ನು ಖರ್ಚು ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು) :

ಅ) ಹೌದು

ಆ) 1995-96ನೇ ಸಾಲಿನಲ್ಲಿ ಕಳೆದ ನಾಲ್ಕು ತಿಂಗಳಿಂದ ಒಟ್ಟು 859.07 ಲಕ್ಷ ರೂ. ಹಣವನ್ನು ಖರ್ಚು ಮಾಡಲಾಗಿದೆ. ಬಾಕಿ ಹಣ ಖರ್ಚು ಮಾಡಲು ತುಮಕೂರು ಉಪನಾಲೆಯಲ್ಲಿ 0 ಕಿಮಿ ನಿಂದ 125 ಕಿಮಿ.ವರೆಗೆ ಮುಖ್ಯ ಕಾಲುವೆ ವಿತರಣಾ ಕಾಲುವೆ ಮತ್ತು ಅಡ್ಡಮೋರಿಗಳು ಹಾಗೂ ನಾಗಮಂಗಲ ಉಪನಾಲೆಯಲ್ಲಿ ಕಿಮೀ 42 ಕಿಮಿ.ವರೆಗೆ ಮುಖ್ಯ ಕಾಲುವೆ ವಿತರಣಾ ಕಾಲುವೆ ಮತ್ತು ಅಡ್ಡಮೋರಿಗಳು ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇ)		ಸಂಖ್ಯೆ	ಮೊತ್ತ ರೂ. ಲಕ್ಷಗಳಲ್ಲಿ
1)	ಟೆಂಡರ್ ಮುಖಾಂತರ ಕೈಗೆತ್ತಿಕೊಂಡ ಕಾಮಗಾರಿಗಳು	357	1270.61
2)	ತುಂಡು ಗುತ್ತಿಗೆ ರೀತ್ಯಾ ವಹಿಸಿ ಕೊಟ್ಟ ಕಾಮಗಾರಿಗಳು	366	102.91

ಈ) ಹೌದು.

ಹೇಮಾವತಿ ಯೋಜನೆಯಲ್ಲಿರುವ ಅನಾವಶ್ಯಕ ಸ್ಪೋರ್ ಸಾಮಗ್ರಿಗಳ ಬಗ್ಗೆ

433 - ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿ ನಾಲಾ ಯೋಜನೆಯಲ್ಲಿ ಇದುವರೆಗೆ ಅನಾವಶ್ಯಕವಾಗಿ ಉಪಯೋಗಿಸಲು ಬಾರದೇ ಇರುವ ಎಷ್ಟು ಮೊತ್ತದ ಸ್ಪೋರ್ ಸಾಮಗ್ರಿಗಳನ್ನು ಸರ್ಕಾರದವರು ಕೊಂಡಿರುವರು?

ಆ) ಸದರಿ ಉಪಯೋಗಿಸಲು ಬಾರದಿರುವ ಸಾಮಗ್ರಿಗಳನ್ನು ಉಪಯೋಗಿಸುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ. ಮತ್ತು ಇಂತಹ ಅನಾವಶ್ಯಕ ಸಾಮಗ್ರಿ ಕೊಂಡ ಅಧಿಕಾರಿಗ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ನೀರಾವರಿ ಕಾಮಗಾರಿಗಳಿಗೆ ಉಪಯೋಗಿಸಲು ಬಾರದೇ ಇರುವ ಸಾಮಗ್ರಿಗಳನ್ನು ವೃಥಾ ದಾಸ್ತಾನಿನಲ್ಲಿಡುವುದಕ್ಕಿಂತ ವಿಶೇಷ ಸರ್ಕಾರಿ ಆದೇಶ ನೀಡಿ, ಬಹಿರಂಗ ಹರಾಜಿನಲ್ಲಿ ಹರಾಜು ಮಾಡಿ ಸದರಿ ಹಣವನ್ನು ಸರ್ಕಾರದ ಖಜಾನೆಗೆ ಜಮಾ ಮಾಡಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಡಿ. ದೇವೇಗೌಡ, ಮುಖ್ಯಮಂತ್ರಿಗಳು

ಅ) ಅನಾವಶ್ಯಕವಾಗಿ ಉಪಯೋಗಿಸಲು ಬಾರದೇ ಇರುವ ಸ್ಪೋರ್ ಸಾಮಗ್ರಿಗಳನ್ನು ಕೊಂಡಿರುವುದಿಲ್ಲ.

ಅ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಭವಿಸುತ್ತಿರುವ ರಸ್ತೆ ಅಪಘಾತಗಳ ತಡೆಗೆ ಕ್ರಮ

108 - ಶ್ರೀ ಎಸ್ ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991-92ರ ಸಾಲಿನಿಂದ 94-95ನೇ ಸಾಲಿನ ಅವಧಿಯಲ್ಲಿ ಬೆಂಗಳೂರು, ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಎಷ್ಟು ಅಪಘಾತಗಳು ಸಂಭವಿಸಿವೆ (ವರ್ಷವಾರು ಸಾವು ನೋವುಗಳ ವಿವರ ನೀಡುವುದು)

ಆ) ಈ ಅಪಘಾತಗಳಿಂದ ಆದ ಅಂದಾಜು ವೆಚ್ಚ ಎಷ್ಟು?

ಇ) ಅಪಘಾತಗಳಿಗೆ ಮುಖ್ಯ ಕಾರಣಗಳು

ಈ) ಈ ಅಪಘಾತಗಳನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು)

ಅ)

ವರ್ಷ	ಅಪಘಾತಗಳ ಸಂಖ್ಯೆ	ಮೃತ ಸಂಖ್ಯೆ	ಗಾಯಾಳುಗಳ ಸಂಖ್ಯೆ
1991-92	833	120	516
1992-93	783	141	604
1993-94	921	125	893
1994-95	1083	192	766

ಆ) ಈ ಅಪಘಾತಗಳಿಂದ ಬೆಂಗಳೂರು ಜಿಲ್ಲೆಯಲ್ಲಿ ಅಂದಾಜು ರೂ. 5,67,000.00 ಹಾಗೂ ತುಮಕೂರು ಜಿಲ್ಲೆಯಲ್ಲಿ 3.43 ಕೋಟಿ ವೆಚ್ಚ ಸಂಭವಿಸಿರುವುದಾಗಿ ಅಂದಾಜು ಮಾಡಲಾಗಿದೆ.

ಇ) ಚಾಲಕರ ನಿರ್ಲಕ್ಷತನ, ಅತಿವೇಗ ಅಜಾಗರೂಕತೆ ಹಾಗೂ ಸಂಚಾರಿ ನಿಯಮ ಉಲ್ಲಂಘನೆಯೊಂದಿಗೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಭಾರೀ ವಾಹನಗಳ ಸಂಚಾರದ ಒತ್ತಡ ಮತ್ತು ಸಂಚಾರ ಯೋಗ್ಯವಲ್ಲದ ರಸ್ತೆಗಳೂ ಸಹ ಅಪಘಾತಕ್ಕೆ ಮುಖ್ಯ ಕಾರಣಗಳು. ಅನೇಕ ಸಂದರ್ಭಗಳಲ್ಲಿ ಪಾದಚಾರಿಗಳ ಅಜಾಗರೂಕತೆಯು ಕಾರಣವಿದೆ. ಮತ್ತು ದನಕರುಗಳ ಸಂಚಾರವೂ ಕಾರಣವಾಗಿರುತ್ತದೆ.

ಈ) ರಾಷ್ಟ್ರೀಯ ಹೆದ್ದಾರಿ 4ರಲ್ಲಿ ವಾಹನ ಅಪಘಾತಗಳನ್ನು ತಡೆಗಟ್ಟಲು

1. ವಾಹನಗಳ ತಪ್ಪು ನಿಲುಗಡೆ ಮತ್ತು ಅತೀವೇಗವನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದೆ.
2. ಬಣ್ಣ ಹಚ್ಚುವುದು, ರಸ್ತೆ ಉಬ್ಬುಗಳನ್ನು ನಿರ್ಮಿಸುವುದು ಹಾಗೂ ಅತೀ ವೇಗವನ್ನು ತಡೆಯುವ ನಿಯಮಗಳನ್ನು ಪಾಲಿಸಲಾಗಿದೆ.
3. ಅತೀ ವೇಗವನ್ನು ನಿರ್ಬಂಧಗೊಳಿಸಲಾಗಿದೆ.
4. ವೀಡಿಯೋ ಚಿತ್ರಗಳ ಮುಖಾಂತರ ವಾಹನ ಸಂಚಾರ ತಿಳುವಳಿಕೆ ಶಿಕ್ಷಣವನ್ನು ಸಾರ್ವಜನಿಕರಿಗೆ ವ್ಯವಸ್ಥೆಗೊಳಿಸಲಾಗುತ್ತಿದೆ. ಪ್ರತಿ ವರ್ಷವು ವಾಹನಗಳ ಸುರಕ್ಷತಾ ಸಪ್ತಾಹವನ್ನು ಆಚರಿಸಲಾಗುತ್ತಿದೆ.